3689(4602); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು); ಮಾನ್ಯ ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಜಲನಿರ್ಮಲ ಯೋಜನೆಯಲ್ಲಿ ಮೂರನೆಯ ಹಂತದಲ್ಲಿ ಕೈಗೆತ್ತಿಕೊಂಡು ಮಂಜೂರು ಮಾಡಿರುವ ಅಂದಾಜು ಯೋಜನೆಯ ವಿವರ ಹಾಗೂ ಖರ್ಚಾದ ವಿವರ ನೀಡುವುದು?

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು)

ಅ) ಜಲನಿರ್ಮಲ ಯೋಜನೆಯ 3ನೇ ತಂಡದಲ್ಲಿ ಯೋಜನಾ ಅನುಷ್ಠಾನಕ್ಕೆ ಈ ಕೆಳಗೆ ತೋರಿಸಿರುವಂತೆ ಒಟ್ಟು 353 ಗ್ರಾಮ ಪಂಚಾಯತ್‌ಗಳು (1187 ಗ್ರಾಮಗಳು) ಆಯ್ಕೆಗೊಂಡಿರುತ್ತವೆ. 3ನೇ ತಂಡದ ಗ್ರಾಮ ಪಂಚಾಯತ್‌ಗಳಲ್ಲಿ ಯೋಜನಾ ತಯಾರಿ ಕಾರ್ಯದ ಪ್ರಕ್ರಿಯೆಗಳು ಈಗ ಪ್ರಾರಂಭಗೊಂಡಿದ್ದು, ಈ ಕಾರ್ಯವು ಪೂರ್ಣಗೊಂಡ ನಂತರ ಯೋಜನಾ ಅಂದಾಜು ವೆಚ್ಚದ ವಿವರ ಲಭ್ಯವಾಗುವುದು.

ಕ್ರ ಸಂ.	ಜಿಲ್ಲೆಗಳ ಹೆಸರು	ಗ್ರಾ.ಪಂ.ಗಳ ಸಂಖ್ಯೆ	ಗ್ರಾಮಗಳ ಸಂಖ್ಯೆ
1	ಬಾಗಲಕೋಟೆ	28	109
2	ಬೆಳಗಾಂ	45	90
3	ಬೀದರ್	27	88
4	ಬಿಜಾಪುರ	23	76
5	ಧಾರವಾಡ	25	58
6	ಗದಗ್	18	51
7	ಗುಲ್ಬರ್ಗಾ	44	170
8	ಹಾವೇರಿ	10	23
9	ಕೊಪ್ಪಳ	31	155
10	ರಾಯಚೂರು	39	134
11	ಉತ್ತರ ಕನ್ನಡ	63	233
	ಒಟ್ಟು	353	1187

3ನೇ ತಂಡದ ಗ್ರಾಮ ಪಂಚಾಯತಿಗಳಲ್ಲಿ ಯೋಜನಾ ಅನುಷ್ಠಾನ ಪ್ರಕ್ರಿಯೆಗಳು ಈಗ ತಾನೇ ಪ್ರಾರಂಭವಾಗಿರುವುದರಿಂದ ಈವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ.

3690(4340); ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು);
ಮಾನ್ಯ ಡಾ॥ ಹೆಚ್.ಸಿ.ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಕರ್ನಾಟಕದಲ್ಲಿ ಹಾಲಿ ಇರುವ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಎಷ್ಟು ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳು ನಡೆದಿವೆ;

ಇ) ಎಷ್ಟು ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳು ನಡೆಯಬೇಕಾಗಿದೆ;

ಈ) ಅವುಗಳು ಯಾವುವು; ಜಿಲ್ಲೆ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು?

ಡಾ॥ ಹೆಚ್.ಸಿ.ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) 5652

ಆ) 5521

ಇ) 131

ಈ) ಪಟ್ಟಿ ಲಗತ್ತಿಸಲಾಗಿದೆ.

ಚುನಾವಣೆ ನಡೆಯಬೇಕಾಗಿರುವ ಗ್ರಾಮ ಪಂಚಾಯತಿಗಳ ವಿವರ.

ಜಿಲ್ಲೆ	ತಾಲ್ಲೂಕು	ಗ್ರಾಮ ಪಂಚಾಯತಿ ಹೆಸರು
1	2	3
1. ಬೆಂಗಳೂರು(ಗ್ರಾಮ)	1.ಹೊಸಕೋಟೆ	1. ಸಮೇತನಹಳ್ಳಿ
		2. ಮುತ್ಸಂದ್ರ
	2. ದೊಡ್ಡ ಬಳ್ಳಾಪುರ	3. ಮಜರಾಹೊಸಹಳ್ಳಿ
		4. ಅರಳುಮಲ್ಲಿಗೆ
		5. ದರ್ಗಾಜೋಗಿಹಳ್ಳಿ
	3. ದೇವನಹಳ್ಳಿ	6. ನಲ್ಲೂರು